ಕರ್ನಾಟಕ ರಾಜ್ಯ ಬೀಜ ನಿಗಮದಿಂದ ಬೀಜ ಮಾರಾಟ

59(1083) ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರಿಗೆ ಮಾರಾಟ ಮಾಡುವ ಬೀಜಗಳು ಬೀಜ ನಿಗಮದವರು ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ದೊರಕುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಬೀಜ ನಿಗಮವನ್ನು ಯಾವ ಕಾರಣಕ್ಕಾಗಿ ಪ್ರಾರಂಭಿಸಲಾಗಿದೆ ಹಾಗೂ ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದಿಲ್ಲವೇ (ವಿವರ ತಿಳಿಸುವುದು)?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) ಕರ್ನಾಟಕ ರಾಜ್ಯ ಬೀಜ ನಿಗಮದವರು ನಿಗದಿಪಡಿಸಿದ ಮಾರಾಟ ದರಕ್ಕಿಂತ ಕಡಿಮೆ ದರದಲ್ಲಿ ಬೀಜಗಳು ಮುಕ್ತ ಮಾರುಕಟ್ಟೆಯಲ್ಲಿ ದೊರಕುವ ಸಾಧ್ಯತೆ ಇದೆ.

ಆ) ರೈತರಿಗೆ ಉತ್ತಮ ಗುಣಮಟ್ಟದ ಬೀಜವನ್ನು ಪೂರೈಸುವ ಸಲುವಾಗಿ ಹಾಗೂ ಖಾಸಗೀ ಬೀಜ ಮಾರಾಟಗಾರರ ಶೋಷಣೆಯಿಂದ ರೈತರನ್ನು ಕಾಪಾಡುವ ಸಲುವಾಗಿ ಕರ್ನಾಟಕ ರಾಜ್ಯ ಬೀಜ ನಿಗಮವನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಈವರೆಗೆ ಸರ್ಕಾರದ ಬೊಕ್ಕಸಕ್ಕೆ ಯಾವುದೇ ವಿಧವಾದ ನಷ್ಟ ಉಂಟಾಗಿರುವುದಿಲ್ಲ.

ಶ್ರೀ ಶಿವಾನಂದ ನಾಯಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಈಗಾಗಲೇ ಅವರು ಒಪ್ಪಿಕೊಂಡಂತೆ ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ದರದಲ್ಲಿ ಬೀಜ ಸಿಗುತ್ತದೆಂದು ಉತ್ತರವನ್ನು ಕೊಟ್ಟಿದ್ದಾರೆ. ರೈತರಿಗೆ ಎಲ್ಲಿ ಕಡಿಮೆ ದರದಲ್ಲಿ ಬೀಜ ಸಿಗುತ್ತದೆ ಅಲ್ಲಿ ಅವರು ಖರೀದಿ ಮಾಡುತ್ತಾರೆ. ಸರಿಯಾದ ರೀತಿಯ ಒಂದು ಕ್ವಾಲಿಟಿ ಇರುವುದಿಲ್ಲ, ಅದು ಸಂಸ್ಕರಣೆಯಾಗಿರುವುದಿಲ್ಲ ಆ ಬೀಜವನ್ನು ರೈತರು ಖರೀದಿ ಮಾಡಿ ಬೆಳೆಯನ್ನು ಬೆಳೆಯುವುದರಿಂದ ಹೆಚ್ಚಿನ ಒಂದು ಇಳುವರಿ ಸಿಗುತ್ತಿಲ್ಲ. ಸರ್ಕಾರವೇ ಆ ಒಂದು ದರಕ್ಕೆ ಒದಗಿಸಿಕೊಟ್ಟರೆ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ತಾವು ಈಗಾಗಲೇ 14 ರೂ.ಗಳಿಗೆ ಒಂದು ಕೆ.ಜಿ. ಯಂತೆ ಭತ್ತವನ್ನು ಕೊಡುತ್ತಿದ್ದೀರಿ. ಆದರೆ ಅದನ್ನು ಸರಿಯಾದ ಸಮಯಕ್ಕೆ ಕೊಡುತ್ತಿಲ್ಲ, ರೈತರ ಬೇಡಿಕೆ ಇರುವಂಥ ಎಲ್ಲಾ ತಳಿಯ ಬೀಜಗಳನ್ನು ತಾವು ಕೊಡುತ್ತಿಲ್ಲ ತಮ್ಮ ಇಲಾಖೆಯಿಂದ ರಾಶಿ ಎನ್ನುವ ಒಂದು ತಳಿಯನ್ನು ಮಾತ್ರ ಕೊಡುತ್ತಿದ್ದೀರಿ ರೈತರ ಬೇಡಿಕೆ ಇರುವಂಥದ್ದು ಜಯಾ, ಭದ್ರಾ ಮತ್ತು ಜ್ಯೋತಿ ಎನ್ನುವ ತಳಿಗಳು, ಇದನ್ನು ತಾವು ಒದಗಿಸಿಕೊಡುತ್ತಿಲ್ಲ. ತಾವು ಮೇ ತಿಂಗಳ ಮೊದಲನೆಯ ವಾರದಲ್ಲಿ ಕೊಡಬೇಕಾಗುತ್ತದೆ. ತಾವು ಮೇ ತಿಂಗಳ ಕೊನೆಯಲ್ಲಿ ಅಥವಾ ಜೂನ್, ಜುಲೈ ತಿಂಗಳಲ್ಲಿ ಕೊಡ[illegible] ರೈತರಿಗೆ

ಏನು ಅನುಕೂಲವಾಗುತ್ತಿಲ್ಲ, ತಾವು ಸಮಯಕ್ಕೆ ಸರಿಯಾಗಿ ಒದಗಿಸಿಕೊಡಬೇಕು. ರೈತರಿಗೆ ಮಾರುಕಟ್ಟೆಯಲ್ಲಿ ಯಾವ ದರಕ್ಕೆ ಸಿಗುತ್ತದೆ ಅದೇ ದರಕ್ಕೆ ಒದಗಿಸಿ ಕೊಡುವಂಥ ಕೆಲಸವನ್ನು ತಾವು ಮಾಡಬೇಕು. ನಾನು ತಮಗೆ ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೆ, ತಾವು ಉತ್ತರವನ್ನು ಕೊಡಲಿಲ್ಲ. ಮಣ್ಣು ಪರೀಕ್ಷೆ ಕೇಂದ್ರದ ಬಗ್ಗೆ ನನ್ನ ಬೇಡಿಕೆ ಇದೆ, ನಮ್ಮ ಜಿಲ್ಲೆಯ ಶಿರ್ಶಿಯಲ್ಲಿ ಒಂದೇ ಒಂದು ಕೇಂದ್ರ ಇದೆ. ಇದಕ್ಕೆ ತಮ್ಮಿಂದ ಉತ್ತರ ಬರಲಿಲ್ಲ, ಅದಕ್ಕಾಗಿ ತಾವು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಇದಕ್ಕೂ ಕೂಡ ಉತ್ತರವನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನಾವು ಭಟ್ಕಳದಿಂದ ಶಿರ್ಶಿಗೆ ಹೋಗಬೇಕಾದರೆ 110 ಕಿ.ಮೀ. ಆಗುತ್ತದೆ, ಕರಾವಳಿಯ 5 ತಾಲ್ಲೂಕುಗಳಿಗೆ ಅನುಕೂಲವಾಗುವ ಒಂದು ಪ್ರದೇಶವೆಂದರೆ ಹೊನ್ನಾವರ, ಹೊನ್ನಾವರ ತಾಲ್ಲೂಕಿನಲ್ಲಿ ಒಂದು ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆದರೆ ರೈತರಿಗೆ ಹೆಚ್ಚು ಅನುಕೂಲದ ಜೊತೆಗೆ ಲಾಭ ಕೂಡ ಆಗುತ್ತದೆ. ಅದಕ್ಕೂ ಸಹ ತಾವು ಉತ್ತರವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ್ ನಾಯಕ್‌ರವರು ಹೇಳಿದ ಹಾಗೆ ಮಾರ್ಕೆಟ್‌ನಲ್ಲಿ ಕೆಲವು ಖಾಸಗಿ ಕಂಪನಿಯವರು ಕೆಲವು ಬೀಜಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಾರೆ. ಆದರೆ ನಮ್ಮ ಬೀಜ ನಿಗಮದವರಿಗೆ ತಮ್ಮದೇ ಆದ ಇನ್‌ಫ್ರಾಸ್ಟ್ರಕ್ಚರ್ ಇದೆ, ಗೋಡೌನ್ ಇದೆ, ಇದೆಲ್ಲವನ್ನು ಲೆಕ್ಕ ಹಾಕಿ ಬೀಜದ ಬೆಲೆಯನ್ನು ಕಟ್ಟುತ್ತಾರೆ. ನಾನು ಹೋದಸಾರಿ ಕಡ್ಲೆಕಾಯಿಗೆ ಈ ತರಹ ಆದಾಗ ಸಂಬಂಧಪಟ್ಟ ತುಮಕೂರು ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು ಚರ್ಚೆ ಮಾಡಿ ಅದನ್ನು ಕಡಿಮೆ ರೇಟ್ ಮಾಡಿಸಿರುತ್ತೇನೆ. ಮುಂದಿನ ದಿನಗಳಲ್ಲಿ ಸಮಯಕ್ಕೆ ಸರಿಯಾಗಿ ಮಳೆಯಾದ್ದಾಗ ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ಬೀಜ ಬೇಕೋ ಅಲ್ಲಿ ಮೊದಲೇ ಗೊಬ್ಬರ ಹಾಗೂ ಬೀಜಗಳನ್ನು ಇಡುವಂಥ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಣ್ಣು ಪರೀಕ್ಷಾ ಕೇಂದ್ರದ ಬಗ್ಗೆ ತಾವು ಒಂದು ಒಳ್ಳೆಯ ಪ್ರಶ್ನೆಯನ್ನು ಕೇಳಿರುತ್ತೀರಿ, ಇವತ್ತು ಆ ಪ್ರಶ್ನೆ ಇಲ್ಲದೆ ಇರುವುದರಿಂದ ಯಾವ ತರಹ ಮಾಡಬೇಕು ಎನ್ನುವುದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅವರಿಗೆ ಸೂಚನೆಯನ್ನು ಕೊಟ್ಟು ತಮ್ಮನ್ನು ಸಂಪರ್ಕಿಸಿ ಆ ಕೆಲಸ ಮಾಡುವಂತೆ ಹೇಳುತ್ತೇನೆ.

ಶ್ರೀ ಶಿವಾನಂದ ನಾಯಕ್ : ಮಾನ್ಯ ಅಧ್ಯಕ್ಷರೆ, ನಾನು ತಳಿಯ ಬಗ್ಗೆ ಕೇಳಿದ್ದೇನೆ. ತಾವು ಒಂದೇ ರಾಸಿ ತಳಿ ಕೊಡುತ್ತಿದ್ದೀರಿ. ಉಳಿದ ತಳಿಗಳ ಬಗ್ಗೆ ರೈತರ ಬೇಡಿಕೆ ಇದೆ, ಅವುಗಳನ್ನು ಕೂಡ ಒದಗಿಸಿಕೊಡಬೇಕೆಂದು ನಾನು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಬೀಜಗಳು ನಮ್ಮಲ್ಲಿ ಎಲ್ಲಾ ಸಿಗುತ್ತವೆ. ಆ ಸಮಯದಲ್ಲಿ ನಿಮಗೆ ರಾಸಿ ತಳಿ ಬಂದಿರಬಹುದು, ಇವತ್ತು ಖಾಸಗಿ ಕಂಪನಿಗಳವರು ಭತ್ತ, ರಾಗಿ ಮಾಡುವುದಿಲ್ಲ. ಸೀಡ್ ಕಾರ್ಪೋರೇಶನ್‌ರವರನ್ನು ಬಿಟ್ಟರೆ ಖಾಸಗಿ ಕಂಪನಿಯವರು ಮಾಡುವುದಿಲ್ಲ. ಬೀಜ ನಿಗಮದವರು ಮಾತ್ರ ಮಾಡುವುದು ಖಾಸಗಿ ಕಂಪನಿಯವರು ಏಕೆ ಮಾಡುವುದಿಲ್ಲವೆಂದರೆ ಅವರಿಗೆ ಹೆಚ್ಚಿಗೆ ಲಾಭ ಬರುವುದಿಲ್ಲ. ಹೆಚ್ಚಿನ ಕ್ವಾಂಟಂ ಇರುತ್ತದೆ, ರೇಟ್ ಕಡಿಮೆ ಇರುತ್ತದೆ. ಅವರು ಕಡಿಮೆ ಇರುವುದನ್ನು ಮಾಡಿ ಜಾಸ್ತಿ ಹಣವನ್ನು ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ತಾವು ಹೇಳಿದಂತೆ ಯಾವ್ಯಾವ ಬೀಜಗಳು ಬೇಕು ಅವುಗಳನ್ನು ಮುಂದಿನ ದಿನಗಳಲ್ಲಿ ಸರಿಯಾದ ಸಮಯಕ್ಕೆ ಒದಗಿಸುವಂಥ ಕೆಲಸವನ್ನು ಮಾಡುತ್ತೇವೆಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುವ ಗೌರವಧನ

60(963) ಶ್ರೀಮತಿ ಶಕುಂತಲ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನ ಎಷ್ಟು;

ಆ) ಸದರಿ ವೇತನದಲ್ಲಿ ರಾಜ್ಯ ಸರ್ಕಾರದ ಹಾಗೂ ಕೇಂದ್ರದ ಪಾಲು ಎಷ್ಟು;

ಇ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು;

ಈ) ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವವರ ಸಂಖ್ಯೆ ಎಷ್ಟು;

ಉ) ರಾಜ್ಯವು ಎಲ್ಲಾ ರೀತಿಯ ಕೆಲಸಗಳಿಗೆ ಕನಿಷ್ಟ ವೇತನ ನಿಗದಿಪಡಿಸಿರುವುದು ನಿಜವೇ;

ಊ) ಹಾಗಿದ್ದಲ್ಲಿ ಇವರಿಗೆ ಈ ಕನಿಷ್ಠ ವೇತನವನ್ನು ಪಾವತಿಸದಿರಲು ಕಾರಣಗಳೇನು;

ಋ) ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ೠ) ಅಂಗನವಾಡಿಗಳಿಗೆ ಪೂರೈಸುವ ಆಹಾರ ಸಾಮಗ್ರಿ ಗುಣಮಟ್ಟ ಕಳಪೆಯಾಗಿರುವುದು ನಿಜವೆ;

ಎ) ಇದನ್ನು ಎಲ್ಲಿಂದ ಖರೀದಿಸಲಾಗುವುದು. ಇವುಗಳನ್ನು ಖರೀದಿಸಲು ಇರುವ ಮಾನದಂಡಗಳೇನು;